# ಮಾಜಿ ಶಾಸಕ ಚಂದ್ರಕಾಂತ ಸಿಂದೋಲ್ ನಿಧನ

ಬೀದರ: ಭಾರತೀಯ ಜನಸಂಘದ ಮಾಜಿ ಶಾಸಕ ಚಂದ್ರಕಾಂತ ಸಿಂದೋಲ್ ಶುಕ್ರವಾರ ನಿಧನರಾಗಿದ್ದಾರೆ. ಅವರಿಗೆ 85 ವರ್ಷ ವಯಸ್ಸಾಗಿತ್ತು. ಅನಾರೋಗ್ಯದಿಂದ ಬಳಲುತ್ತಿದ್ದ ಚಂದ್ರಕಾಂತ, ಇಬ್ಬರು ಪುತ್ರರು ಮತ್ತು ನಾಲ್ವರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ. ಸಿಂದೋಲ್ ಅವರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ನಗರದ ನರಸಿಂಹ ಝರಣಾ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ. ಆರ್‌ಎಸ್‌ಎಸ್‌ನ ರಾಜಕೀಯ ಮುಖವಾಣಿ ಎಂದೆನಿಸಿಕೊಂಡಿದ್ದ ಭಾರತೀಯ ಜನಸಂಘ, ನಂತರ ಬಿಜೆಪಿಯಾಗಿ ರೂಪ ಪಡೆಯಿತು. ಸ್ವಾತಂತ್ರ್ಯಾನಂತರದ ನಾಲ್ಕನೇ (1967) ಚುನಾವಣೆಯಲ್ಲಿ ಜನಸಂಘದಿಂದ ನಾಲ್ವರು ಶಾಸಕರು ಆಯ್ಕೆಯಾಗಿದ್ದರು. ಅದರಲ್ಲಿ ಬೀದರ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದ ಚಂದ್ರಕಾಂತ ಸಿಂದೋಲ್ ಕೂಡ ಒಬ್ಬರಾಗಿದ್ದರು. ಜನಸಂಘದಿಂದ ಆರಿಸಿ ಬಂದಿದ್ದ ಈ ನಾಲ್ವರು ಸದಸ್ಯರು ದಕ್ಷಿಣ ಭಾರತದಲ್ಲಿ ಹೊಸ ಇತಿಹಾಸ ಬರೆದಿದ್ದರು. ಸಂಘ ಪರಿವಾರದ ಗರಡಿಯಲ್ಲಿ ಪಳಗಿದ್ದ ಸಿಂದೋಲ್, ಕಿರಿಯ ವಯಸ್ಸಿನಲ್ಲಿಯೇ ಜನಸಂಘದಿಂದ ಕಣಕ್ಕಿಳಿದು ಗೆದ್ದಿದ್ದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮಕ್ಸೂದ್ ಅಲಿ ಖಾನ್ ವಿರುದ್ಧ ಗೆಲುವು ಸಾಧಿಸಿದ್ದರು. ಜನಸಂಘ, ಬಿಜೆಪಿಯಾಗಿ ಪರಿವರ್ತನೆಗೊಂಡ ನಂತರ ಸಿಂದೋಲ್ ಕಾಂಗ್ರೆಸ್‌ನತ್ತ ಮುಖ ಮಾಡಿದರು. ಆದರೆ, ಚುನಾವಣೆಗಳಿಂದ ದೂರ ಉಳಿದುಕೊಂಡರು.

